# ಯುವಕರೇ, ಎಚ್ಚೆತ್ತುಕೊಳ್ಳಿ !

'ಜ್ಯೋತಿಷ್ಮತಿ'

ಪ್ರಾಚೀನ ಕಾಲದಲ್ಲಿ ಉಪನಿಷತ್ತುಗಳು, ''ಏಳಿ, ಎಚ್ಚೆತ್ತುಕೊಳ್ಳಿ! ಮಹಾತ್ಮರ ಬಳಿಸಾರಿ. ಅವರಿಂದ ಕಲಿತು ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಿ!'' ಎಂದು ಸಾರಿವೆ. ಬುದ್ಧಿವಂತರಾಗಿ, ವಿವೇಕಶಾಲಿಗಳಾಗಿ ಎಂಬ ಕರೆಯನ್ನು ನಮ್ಮ ಋಷಿ ಪರಂಪರೆಯಲ್ಲಿ ಯಾವಾಗಲೂ ನೀಡುತ್ತಿದ್ದರು. ಸಹಸ್ರ ವರ್ಷಗಳಷ್ಟು ಹಿಂದೆ ಬಂದ ಶಂಕರಾಚಾರ್ಯರು, ಆಧುನಿಕ ಸಂತಶ್ರೇಷ್ಠರಾದ ಸ್ವಾಮಿ ವಿವೇಕಾನಂದರು ಯುವಕರಾಗಿದ್ದಾಗಲೇ ಮಹತ್ಕಾರ್ಯವನ್ನು ಸಾಧಿಸಿ ಹೋದರು. ಅವರ ಸಂದೇಶಗಳಲ್ಲೂ ಯುವಶಕ್ತಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ.

ಶಂಕರಾಚಾರ್ಯರು ತಮ್ಮ 'ಭಜ ಗೋವಿಂದಂ' ಸ್ತೋತ್ರದಲ್ಲಿ ಹೇಳುತ್ತಾರೆ : 'ಅವಸಾನ ಕಾಲ ಬಂದಿರುವಾಗ ವ್ಯಾಕರಣ ಅಭ್ಯಾಸ ಮಾಡುವುದರಿಂದ ಏನು ಪ್ರಯೋಜನ? ಅದನ್ನು ಬಾಲ್ಯದಲ್ಲೇ ಕಲಿಯಬೇಕು. ಆದ್ದರಿಂದ ಕಾಲ ಮೀರುವ ಮೊದಲೇ ಭಗವಂತನನ್ನು ಭಜಿಸು.'

ಇದೇ ರೀತಿ, ಸ್ವಾಮಿ ವಿವೇಕಾನಂದರೂ ಹೇಳುತ್ತಾರೆ:

'' 'ಆಶಿಷ್ಠರೂ, ಬಲಿಷ್ಠರೂ, ದೃಢಿಷ್ಠರೂ, ಮೇಧಾವಿಗಳೂ ಆದಂತಹ ಯುವಕರು ಮಾತ್ರ ಭಗವಂತನನ್ನು ಪಡೆಯಬಹುದು' ಎಂದು ವೇದ ಸಾರುವುದು. ತಾರುಣ್ಯದ ಶಕ್ತಿ ಇರುವಾಗ ನಿಮ್ಮ ಭವಿಷ್ಯವನ್ನು ನಿರ್ಧರಿಸಬೇಕಾಗಿದೆ. ಮುದುಕರಾಗಿ ಶಕ್ತಿ ಕುಗ್ಗಿದ ಮೇಲೆ ಅಲ್ಲ. ನವತಾರುಣ್ಯದ ಉತ್ಸಾಹದಲ್ಲಿ ಅದನ್ನು ನಿರ್ಧರಿಸಬೇಕಾಗಿದೆ. ಕೆಲಸ ಮಾಡಿ ; ಈಗ ತಾನೇ ವಿಕಸಿತವಾದ, ಯಾರೂ ಮುಟ್ಟದ, ಮೂಸಿ ನೋಡದ, ಹೂವುಗಳನ್ನು ಭಗವಂತನ ಅಡಿದಾವರೆಯಲ್ಲಿ ಇಡುವುದಕ್ಕೆ ಇದೇ ಸಮಯ. ದೇವರು ಇದನ್ನು ಮಾತ್ರ ಪರಿಗ್ರಹಿಸುವನು.''

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೩, ಪು.೧೭೫)*

## ಸಮಯ ವ್ಯರ್ಥವಾಗದಿರಲಿ

ನಮ್ಮ ಬದುಕಿನಲ್ಲಿ ಬಹುಭಾಗ ನಿದ್ರೆಯಲ್ಲಿ, ದುಡಿಮೆಯಲ್ಲಿ ವ್ಯಯವಾಗುತ್ತದೆ. ಉಳಿದ ಸಮಯ ಮನರಂಜನೆ, ಸ್ನೇಹಿತರ-ಬಂಧುಬಾಂಧವರ ಒಡನಾಟ, ನಾನಾ ಕಾರ್ಯಕ್ರಮಗಳು, ಕ್ರೀಡೆ-ಹವ್ಯಾಸಗಳಲ್ಲಿ ವ್ಯಯಿಸುತ್ತೇವೆ. ಇನ್ನು ಜೀವನದಲ್ಲಿ ಏನನ್ನಾದರೂ ಸಾಧಿಸುವುದಕ್ಕೆ ಸಮಯವೆಲ್ಲಿ?

ಒಂದೊಂದು ಕ್ಷಣವೂ ಅಮೂಲ್ಯ; ಕಳೆದುಹೋದ ಒಂದೊಂದು ಕ್ಷಣ ಕೂಡ ಮರಳಿ ಲಭಿಸಲಾರದು. ಆದ್ದರಿಂದ ಜೀವನದ ಪ್ರತಿ ಕ್ಷಣವೂ ಅಮೂಲ್ಯ. ಅದು ವ್ಯರ್ಥವಾಗದ ಹಾಗೆ ನೋಡಿಕೊಳ್ಳಬೇಕು.

ಸರಿಯಾದ ದಿನಚರಿಯಿಲ್ಲದೆ, ಅರಿವಿನಿಂದ ಮೊದಲೇ ಮಾಡಬೇಕಾದ ಕೆಲಸಗಳನ್ನು ಗುರುತುಹಾಕಿಕೊಳ್ಳದೆ ಏನನ್ನೂ ಸಾಧಿಸಲಾಗದು. ದಿನದ ಆರಂಭದಲ್ಲೇ ಅಂದು ಮಾಡಬೇಕಾದ ಕೆಲಸಗಳನ್ನು ಗುರುತುಹಾಕಿಕೊಂಡು, ನಡುನಡುವೆ ಅದನ್ನು ನೋಡಿಕೊಳ್ಳುತ್ತ ಒಂದೊಂದಾಗಿ ಆ ಕೆಲಸಗಳನ್ನು ಮಾಡಿ ಮುಗಿಸಬೇಕು. ಇದು ಪ್ರತಿದಿನವೂ ಮಾಡಬೇಕಾದ ಅಭ್ಯಾಸವಾಗಬೇಕು.

ದಿನದ ಕೊನೆಯಲ್ಲಿ ಒಂದು ಹತ್ತು ನಿಮಿಷ ಅಂದು ಮಾಡಿದ ಕೆಲಸಗಳ ಬಗ್ಗೆ ಅವಲೋಕಿಸುತ್ತ, ಎಷ್ಟರಮಟ್ಟಿಗೆ ನಾನಿಂದು ಮಾಡಬೇಕಿದ್ದ ಕೆಲಸಗಳನ್ನು ಮಾಡಿ ಮುಗಿಸಿದೆ, ಎಷ್ಟು ಸಮರ್ಥವಾಗಿ ಮಾಡಿದೆ, ಇನ್ನೇನಾದರೂ ಮಾಡಿ ಅದನ್ನು ಇನ್ನಷ್ಟು ಉತ್ತಮಗೊಳಿಸಬಹುದಿತ್ತೆ ಎಂದೆಲ್ಲ ಮೆಲುಕು ಹಾಕುವ ಅಭ್ಯಾಸ ಒಳ್ಳೆಯದು. ಅದರಿಂದ ಮರುದಿನದ ಕಾರ್ಯ ಉತ್ತಮವಾಗುತ್ತದೆ.

## ಯುವಕರ ಸಹಜ ಸಾಮರ್ಥ್ಯ

ಬಾಲ್ಯದಲ್ಲಿ ನಮ್ಮ ಎಲ್ಲ ಅಂಗಾಂಗಗಳು ಸಂಪೂರ್ಣವಾಗಿ ವೃದ್ಧಿಗೊಂಡಿರುವುದಿಲ್ಲ; ಇಳಿವಯಸ್ಸಿನಲ್ಲಿ ಅವು ಸಡಿಲವಾಗಿ, ಶಕ್ತಿಹೀನವಾಗಿರುತ್ತವೆ. ಮನಸ್ಸೂ ಕೂಡ ಅದೇ ರೀತಿ. ತಾರುಣ್ಯದಲ್ಲಿಯೇ ನಮ್ಮ ದೇಹ-ಮನಸ್ಸುಗಳು ಸಂಪೂರ್ಣ ಶಕ್ತಿಯುತವಾಗಿದ್ದು, ಆರೋಗ್ಯಪೂರ್ಣವಾಗಿರುತ್ತವೆ. ಆದಕಾರಣ ಜೀವನದಲ್ಲಿ ಏನನ್ನು ಸಾಧಿಸುವುದಿದ್ದರೂ ಯುವಕರಾಗಿದ್ದಲೇ ಅದನ್ನು ಮಾಡಿ ಮುಗಿಸಬೇಕು.

ವಿದ್ಯಾಭ್ಯಾಸದ ಅವಧಿಯಲ್ಲಿ ವಿವಿಧ ವಿಷಯಗಳ ಅಧ್ಯಯನದೊಂದಿಗೆ ತಮ್ಮ ವ್ಯಕ್ತಿತ್ವ ಸರಿಯಾಗಿ ರೂಪುಗೊಳ್ಳುವ ಬಗ್ಗೆ ಯುವಕರು ವಿಶೇಷವಾಗಿ ಗಮನ ಕೊಡಬೇಕು. ವೇದಮಂತ್ರವೊಂದು ಹೇಳುವಂತೆ, ಉತ್ತಮ ವಿಷಯಗಳು ಎಲ್ಲಿಂದಾದರೂ ಬರಲಿ, ಅದಕ್ಕೆ ಸ್ವಾಗತ. ನಮ್ಮಲ್ಲಿ ಸಹಜವಾಗಿರುವ ನಂಬಿಕೆ, ವಿಶ್ವಾಸ, ಶ್ರದ್ಧೆ, ಒಳ್ಳೆಯ ಗುಣಗಳಿಗೆ ವಿರುದ್ಧವಾದ, ರಾಗ-ದ್ವೇಷಗಳನ್ನು ಬಿತ್ತುವ, ಸಂಘರ್ಷಗಳಿಗೆ ಕಾರಣವಾಗುವ ವಿಚಾರಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕು. ಅಂತಹ ಚಟುವಟಿಕೆಗಳಲ್ಲಿ ತೊಡಗಿರುವ ಜನರು ನಮಗೆ

ಎಷ್ಟೇ ಹತ್ತಿರದವರಾಗಿರಲಿ, ಅವರಿಂದ ದೂರವಾಗಬೇಕು. ಜೀವನದಲ್ಲಿ ಧೂಮಪಾನ, ಕುಡಿತವೇ ಮುಂತಾದ ಕೆಟ್ಟ ಚಟಗಳನ್ನು ಕಲಿಸುವವರ ಸಂಪರ್ಕ ಮಾಡಲೇಬಾರದು. ಒಂದಲ್ಲ ಒಂದು ದಿನ ನಾವೂ ಅದಕ್ಕೆ ಬಲಿಯಾಗುವೆವು ಎಂಬ ಎಚ್ಚರಿಕೆ ಸದಾ ಇರಬೇಕು.

ಇಂದಿನ ಯುವಜನಾಂಗ ಮಾರುಹೋಗಿರುವ ಸಿನಿಮಾ, ಆಧುನಿಕತೆಯ ಮೆರುಗು, ಥಳುಕಿನ ನಟ-ನಟಿಯರ ಆರಾಧನೆ - ಇವುಗಳಿಂದ ನಾವು ಅದೆಂತಹ ಉತ್ತಮ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ? ಜೀವನ ಮೌಲ್ಯಗಳನ್ನು ನೀಡಲಾರದ, ದೈಹಿಕ ಸೌಂದರ್ಯ, ಇಂದ್ರಿಯಭೋಗ ಹಾಗೂ ವ್ಯಸನಗಳನ್ನು ವೈಭವೀಕರಿಸುವ ಆಧುನಿಕ ಬದುಕು ನಮ್ಮ ಭವಿಷ್ಯವನ್ನು ನಾಶಗೊಳಿಸುತ್ತವೆ. ನಮ್ಮ ಅಮೂಲ್ಯ ಯೌವನವನ್ನು, ಅಪಾರ ಶಕ್ತಿಸಾಮರ್ಥ್ಯಗಳನ್ನು ಪೋಲುಮಾಡುತ್ತವೆ.

ಅದಕ್ಕೆ ಬದಲಾಗಿ, ಉದಾತ್ತ ಆದರ್ಶಗಳ ಕಡೆಗೆ ಯುವಕರು ತಮ್ಮ ಗಮನ ಹರಿಸಬೇಕು. ರಾಷ್ಟ್ರೀಯತೆ, ದೇಶಭಕ್ತಿ, ತ್ಯಾಗ, ಸೇವಾಮನೋಭಾವ, ಉನ್ನತ ಚಿಂತನೆ ಇವುಗಳನ್ನು ಸಾರುವ ಮಹಾನ್ ಚೇತನಗಳ ಜೀವನವನ್ನು ಓದಿ ತಿಳಿದುಕೊಳ್ಳಬೇಕು. ಜೀವನದಲ್ಲಿ ಎದುರಾಗುವ ಹಲವು ಸವಾಲುಗಳನ್ನು ಅಂಜದೆ ಎದುರಿಸುವ, ಹೊಸ ಹೊಸ ಹುರುಪಿನಿಂದ ಮುನ್ನುಗ್ಗುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಇದಕ್ಕಾಗಿ ಯುವಕರು ತಮ್ಮೆಲ್ಲ ಚೈತನ್ಯವನ್ನು ವಿನಿಯೋಗಿಸಬೇಕು.

### ಸ್ವಾಮೀಜಿ ನೀಡಿದ ಕರೆ

ಇಂದಿನ ಭಾರತದ ಯುವಕ-ಯುವತಿಯರಿಗೆ ಎಲ್ಲ ಆದರ್ಶ, ಧ್ಯೇಯ, ಸ್ಫೂರ್ತಿ ತುಂಬಬಲ್ಲ ಮಾತುಗಳು ಸ್ವಾಮಿ ವಿವೇಕಾನಂದರ ನುಡಿಗಳಲ್ಲಿವೆ. ಬೆಂಕಿಯ ಕಿಡಿಗಳಂತಿರುವ ಅವರ ನುಡಿಗಳು ಎಲ್ಲ ಗೊಂದಲ, ಸಂದೇಹ, ದೌರ್ಬಲ್ಯಗಳನ್ನು ಬೇರುಸಮೇತ ಸುಟ್ಟು ಬೂದಿ ಮಾಡಬಲ್ಲವು. ಅವುಗಳನ್ನು ನಮ್ಮ ಯುವಕರು ಸದಾ ಓದಿಕೊಂಡು, ಸ್ಮರಣೆಗೆ ತಂದುಕೊಳ್ಳುವುದು ಒಂದು ಅತ್ಯುತ್ತಮ ಅಭ್ಯಾಸವಾಗುತ್ತದೆ. ಅವರ ಶಕ್ತಿಪೂರ್ಣ ಮಾತುಗಳಲ್ಲಿ ಕೆಲವು ಇಲ್ಲಿವೆ:

''ಭಾರತ ವರ್ಷದ ಉದ್ಧಾರ ಭಾರತೀಯರಿಂದಲೇ ಆಗಬೇಕಾಗಿದೆ. ಯುವ ಸಂತಾನರೆ, ಈ ಹೊಸ ಆದರ್ಶಕ್ಕೆ ನಿಮ್ಮ ಬಾಳನ್ನು ಅರ್ಪಿಸಿ, ನೂರಾರು ಮಂದಿ ಇದರಲ್ಲಿ ಉನ್ಮತ್ತರಾಗಬಲ್ಲಿರಾ? ಭಾರತಮಾತೆಗೆ ಕನಿಷ್ಠ ಪಕ್ಷ ಒಂದು ಸಾವಿರ ಯುವಕರ ಬಲಿಯಾದರೂ ಬೇಕು. ಪುರುಷಸಿಂಹರು! ಮೂರ್ಖರಲ್ಲ! ಮನಸ್ಸಿನಲ್ಲಿಡಿ. ಯುವಕರೇ, ನನ್ನ ಭರವಸೆಯೆಲ್ಲಾ ನಿಮ್ಮ ಮೇಲಿದೆ. ನಿಮ್ಮ ದೇಶದ ಕರೆಗೆ ಕಿವಿಗೊಡುವಿರೇನು?



ಬಡವರಲ್ಲಿ ಅನುತಾಪವನ್ನೂ, ಹಸಿದ ಹೊಟ್ಟೆಗೆ ಹಿಟ್ಟನ್ನೂ, ಜನಸಾಮಾನ್ಯರಿಗೆ ತಿಳಿವಳಿಕೆಯನ್ನೂ ಕೊಡುವಂತಹ, ನೂತನ ಸಂಸ್ಥೆಯನ್ನು ಉಂಟುಮಾಡುವದಕ್ಕಾಗಿಯೂ, ನಿಮ್ಮ ಪೂರ್ವಿಕರ ಕಿರುಕುಳದಿಂದ ಪಶುಸಮಾನಕ್ಕೆ ಇಳಿದವರನ್ನು ಮಾನವರನ್ನಾಗಿ ಮಾಡುವುದಕ್ಕಾಗಿಯೂ, ಪ್ರಾಣ ಹೋಗುವ ವರೆಗೂ ಹಿಂಜರಿಯದೆ ಹೋರಾಡುವ, ಸ್ವಾರ್ಥತ್ಯಾಗಿಗಳಾದ ಎಷ್ಟು ಮಂದಿ ಯುವಕರನ್ನು ಈಗ ನಮ್ಮ ನಾಡು ಕೊಡುವುದು?

''ಕೆಲವು ಶಿಷ್ಯರು ನಮಗೆ ಬೇಕಾಗಿದ್ದಾರೆ. ಅವರು ಬೆಂಕಿಯ ಚೂರಿನಂತಹವರಾಗಬೇಕು, ಬುದ್ಧಿವಂತರಾಗಬೇಕು. ಮೃತ್ಯುವಿನ ದಾಡೆಯೊಳಗೆ ಪ್ರವೇಶ ಮಾಡುವುದಕ್ಕೂ ಸಿದ್ಧರಾಗಿರಬೇಕು. ಸಾಗರವನ್ನು ಕೂಡ ಈಜುವ ಸಾಹಸವಿರಬೇಕು. ಅಂತಹ ನೂರಾರು ಮಂದಿ ಗಂಡಸರೂ ಹೆಂಗಸರೂ ಬೇಕಾಗಿದ್ದಾರೆ. ಉತ್ಸಾಹಿಗಳೂ ಅಭಿಮಾನಶಾಲಿಗಳೂ ಆದ ಕೆಲವು ಯುವಕರು ಸಿಕ್ಕಿದರೆ ನಾನು ದೇಶವನ್ನು ಅಲ್ಲೋಲಕಲ್ಲೋಲ ಮಾಡಿಬಿಟ್ಟೇನು.

''ಪುರುಷಸಿಂಹರು, ಪುರುಷಸಿಂಹರೇ ಬೇಕಾಗಿರುವುದು. ಉಳಿದುದೆಲ್ಲವೂ ಸಿದ್ಧವಾಗುವುದು. ಬಲಿಷ್ಠರೂ ವೀರ್ಯವಂತರೂ ಶ್ರದ್ಧಾವಂತರೂ ಏಕನಿಷ್ಠೆಯವರೂ ಆದ ಯುವಕರು ಬೇಕಾಗಿದ್ದಾರೆ. ಇಂತಹ ನೂರು ಮಂದಿ ಇದ್ದರೆ ಜಗತ್ತನ್ನೇ ಕ್ರಾಂತಿಗೊಳಿಸಬಹುದು. ಮೊದಲು ನಾವು ಅವರ ಜೀವನವನ್ನು ರೂಪಿಸಬೇಕು. ಆ ಬಳಿಕ ನಿಜವಾದ ಕೆಲಸವನ್ನೇನಾದರೂ ಅವರಿಂದ ಅಪೇಕ್ಷಿಸಬಹುದು.''